## 10

# ದಕ್ಷಿಣ ರಾಜ್ಯ

## ರೆಹಬ್ಬಾಮನ ಸಿಂಹಾಸನಾರೋಹಣದಿಂದ ಯೆರೂಸಲೇಮಿನ ಪತನದವರೆಗೆ ಕ್ರಿ.ಪೂ. 722-586 (1 ಅರಸುಗಳು 12-22; 2 ಅರಸುಗಳು 1-25; 2 ಪೂರ್ವಕಾಲವೃತ್ತಾಂತ 10-36[1])

**ಪೀಠಿಕೆ.**-ಸಮಾರ್ಯದ ಪತನದ ಇಸ್ರಾಯೇಲ್ ರಾಜ್ಯಕ್ಕೆ ಅಂತ್ಯವನ್ನು ಹಾಕಿತು ಮತ್ತು ಎರಡು ರಾಜ್ಯಗಳ ಅವಧಿಯನ್ನು ಮುಕ್ತಾಯಗೊಳಿಸಿತು. ಯೆಹೂದ್ಯವು ಕೇವಲ ಒಂದನೂರ ಐವತ್ತು ವರ್ಷ ಹೆಚ್ಚು ಉಳಿಯಿತು; ಮತ್ತು ಸಮಾರ್ಯವು ವಶಪಡಿಸಿ ಕೊಳ್ಳಲ್ಪಟ್ಟದ್ದು ಇಸ್ರಾಯೇಲಿಗಿಂತ ಯೆಹೂದಕ್ಕೆ ಎಷ್ಟೋ ಕಡಿಮೆ ಮಹತ್ವದ್ದಾಗಿದ್ದಂತೆ, ಯೆಹೂದದ ಚರಿತ್ರೆಯ ನಾಲ್ಕು ನೂರು ವರ್ಷಗಳನ್ನು ಒಂದು ಅವಧಿಯಂತೆ ತೆಗೆದು ಕೊಳ್ಳುವುದರಿಂದ ನಾವು ಐಕ್ಯತೆಯನ್ನು ಕಾಪಾಡಬಹುದು.

ಯೆಹೂದದ ಚರಿತ್ರೆಯ ಒಂದು ದೊಡ್ಡ ಹೆಸರಿನ ಸಹನೆಯ ಪ್ರಭಾವವನ್ನು ಉದಾಹರಿಸುತ್ತದೆ. ದಾವೀದನ ಆಳ್ವಿಕೆಯು ಆದರ್ಶ ಅರಸನನ್ನು ಮತ್ತು ರಾಜ್ಯವನ್ನು ಒದಗಿಸಿತು, ಅವನ ಬಗ್ಗೆ ಮತ್ತು ಅವನ ವಂಶಜರ ಬಗ್ಗೆ ಜನಾಂಗದ ಪ್ರವಾದಿಕ ನಿರೀಕ್ಷೆಗಳೂ ಪ್ರವೃತ್ತಿಗಳೂ ಕೂಡಿಸಲ್ಪಟ್ಟಿವೆ. ಸೊಲೊಮೋನನ ವಿಗ್ರಹಾರಾಧನೆಗಳ ನೈತಿಕ ಆಘಾತದ ನಂತರ, ಕೆಲ ಸಮಯ ಅವರು ಯಾರೊಬ್ಬಾಮನ ಸುತ್ತು ಹಾಗೂ ಉತ್ತರ ರಾಜ್ಯದೊಂದಿಗೆ ಕೂಡಿಕೊಂಡಿದ್ದರು. ದಂಗೆಯನ್ನು ತುಳಿಯಲು ರೆಹಬ್ಬಾಮನು ಕಷ್ಟಪಡಲಿಲ್ಲ. ಯಾರೊಬ್ಬಾಮನು ಮತ್ತು ಯೆಹುವು ಇಬ್ಬರೂ ರಾಜ ವಂಶಗಳ ಸ್ಥಾಪಕರಂತೆ ಪ್ರವಾದಿಕವಾಗಿ ನೇಮಿಸಲ್ಪಟ್ಟಿದ್ದರು; ಆದರೆ ಇಬ್ಬರೂ ಪ್ರವಾದಿಕ ನಿರೀಕ್ಷೆಗಳನ್ನು ಬಹಳವಾಗಿ ನಿರಾಶೆಗೊಳಿಸಿದರು. ಅಂತಿಮವಾಗಿ, ಸಮಾರ್ಯ ಮತ್ತು ಇಸ್ರಾಯೇಲ ಅಸ್ಸೀರಿಯದ ಮುಂದೆ ಕೆಳಗೆ ಹೋದಾಗ, ಯೆಹೂದದ ಚಿಕ್ಕ ರಾಜ್ಯವು, ಅದರ ಅತ್ಯುತ್ತಮ ಅರ್ಥದಲ್ಲಿ, "ಇಡೀ ರಾಷ್ಟ್ರೀಯ ಭಾವನೆಯನ್ನು ತನ್ನೊಳಗೆ ಕೂಡಿಸಿಕೊಂಡಿತು."

ಬೈಬಲ್ ಚರಿತ್ರೆಯ ಮುಖ್ಯ ಉದ್ದೇಶವನ್ನು ಅಂದರೆ ನಿಜವಾದ ಧರ್ಮದ ಮೂಲವನ್ನು ಹಾಗೂ ಪ್ರಗತಿಯನ್ನು ಶೋಧಿಸುವುದನ್ನು ನಾವು ಮರೆತುಬಿಡಬಾರದು. ಆ ಉದ್ದೇಶದ ಬೆಳಕಿನಲ್ಲಿ ಹಿಬ್ರೂ ಚರಿತ್ರೆಯನ್ನು ಅಧ್ಯಯನ ಮಾಡತಕ್ಕದ್ದು. ಹೀಗೆ ದೃಷ್ಟಿಸುವಾಗ, ದಕ್ಷಿಣ ರಾಜ್ಯದ ನಾಲ್ಕುನೂರು ವರ್ಷಗಳು ಅವನತಿ ಮತ್ತು ಪುನರುದ್ಧಾರಗಳ ನಾಲ್ಕು ಅವಧಿಗಳಲ್ಲಿ ವಿಭಾಗಿಸಲ್ಪಡಬಹುದು, ಪ್ರತಿಯೊಂದು ಆ ಸಮಯದಲ್ಲಿ ಆಳುತ್ತಿದ್ದ ಅರಸರುಗಳ ಗುಣಲಕ್ಷಣದೊಂದಿಗೆ ನಿಕಟವಾಗಿ ಸಂಬಂಧಿಸಿರಬೇಕು. ಇಸ್ರಾಯೇಲಿನಂತೆ ಇರದೇ, ಯೆಹೂದಕ್ಕೆ ಎಲ್ಲಾ ಸಮಯಗಳಲ್ಲಿ ಒಂದೇ ರಾಜವಂಶವು, ದಾವೀದನ ರಾಜವಂಶವು ಇತ್ತೆಂಬುದನ್ನು ಜ್ಞಾಪಿಸಲ್ಪಡುತ್ತದೆ.

## I. ಮೊದಲನೆಯ ಅವನತಿ ಮತ್ತು ಪುನರುಜ್ಜೀವನ.

### ನಾಲ್ಕು ಆಳ್ವಿಕೆಗಳು, ತೊಂಭತ್ತು ವರ್ಷಗಳು.

**1. ರೆಹಬ್ಬಾಮನ ಮತ್ತು ಅಬಿಯಾಮನ ಕೆಳಗೆ ಅವನತಿ.**-*a. ಧರ್ಮ.*-ಸೊಲೊಮೋನನಿಂದ ಪ್ರಾರಂಭವಾದ ವಿಗ್ರಹಾರಾಧನೆಯ ಪ್ರವೃತ್ತಿಯು ಮುಂದಿನ ಇಪ್ಪತ್ತು ವರ್ಷಗಳಲ್ಲಿ ಮುಂದುವರಿದು ಹೆಚ್ಚಾಗಿ ಬೆಳೆಯಿತು. ಪ್ರವಾದಿಗಳ ವಿರೋಧಗಳಿದ್ದರೂ ದೇವರ ಆರಾಧನೆಯು ಬಿದ್ದುಹೋಯಿತು, ನಾಡಿನಲ್ಲೆಲ್ಲಾ ವಿಗ್ರಹಾರಾಧನೆಯ ಬಲಿ ಪೀಠಗಳು ತುಂಬಿಕೊಂಡು, ಮತ್ತು ಜನರ ಮಧ್ಯದಲ್ಲಿ ಅತೀಯಾದ ಅನೈತಿಕತೆಯು ಪ್ರಸರಿಸಲ್ಪಟ್ಟಿತು.

*b. ಇಸ್ರಾಯೇಲಿನೊಂದಿಗೆ ಸಂಬಂಧಗಳು.*-ಯಾರೊಬ್ಬಾಮನೊಂದಿಗೆ ಹತ್ತು ಕುಲಗಳು ಬೇರೆಯಾಗಿ ಹೋದಾಗ, ರೆಹಬ್ಬಾಮನು ದಂಗೆಯನ್ನು ತಗ್ಗಿಸಲು ಒಂದು ಸೈನ್ಯವನ್ನು ಕೂಡಿಸಿದನು; ಆದರೆ ಪ್ರವಾದಿಯಾದ ಶೆಮಾಯನ ಬುದ್ಧಿವಾದವನ್ನು ಕೇಳಿ ಅವನು ಪ್ರಯತ್ನವನ್ನು ಬಿಟ್ಟುಬಿಟ್ಟನು. ಎರಡು ರಾಜ್ಯಗಳು ವಿರುದ್ಧವಾಗಿ ಮುಂದುವರಿದವು; ಮತ್ತು, ಅಬೀಮನ ಆಳ್ವಿಕೆಯ ಮೂರು ವರ್ಷಗಳಲ್ಲಿ, ಇಸ್ರಾಯೇಲಿನ ಮೇಲೆ ಜೆಮರ್ರೈಮದ ಯುದ್ಧದಲ್ಲಿ ಬಲವಾದ ಸೋಲನ್ನು ತಂದನು.

*c. ಶೀಶಕನ ದಂಡಯಾತ್ರೆ.* - ಸೊಲೊಮೋನನು ಐಗುಪ್ತದ ರಾಜಕುಮಾರಿಯನ್ನು ಮದುವೆಯಾಗಿದ್ದನು: ಆದರೆ ಯಾರೊಬ್ಬಾಮನ ಪಕ್ಷವಹಿಸಿದ ಹೊಸ ರಾಜವಂಶವು ನೈಲ್‌ನದಿಯ ಮೇಲೆ ಉದಯವಾಯಿತು. ಈ ರಾಜವಂಶದ ಅರಸನಾದ ಶೀಶಕನು ಪಲೆಸ್ತೀನದ ಮೇಲೆ ದಾಳಿಮಾಡಿದನು, ಯೆರೂಸಲೇಮನ್ನು ವಶಪಡಿಸಿಕೊಂಡನು, ಮತ್ತು ದೇವಾಲಯದ ಬಂಗಾರದ ವೈಭವಗಳನ್ನು ಕಿತ್ತುಕೊಂಡು ಹೋದನು. ಶೀಶಕನು ತಾನೇ ಬೈಬಲಿನ ವಿವರಣೆಯ ಚಮತ್ಕಾರವಾದ ದೃಢಪಡಿಸುವಿಕೆಯನ್ನು ಬಿಟ್ಟಿದ್ದಾನೆ. ಅವುಗಳನ್ನು ಕರ್ನಾಕದಲ್ಲಿಯ ದೊಡ್ಡ ದೇವಾಲಯದಲ್ಲಿ ಕೆತ್ತಿಸಿದ್ದಾನೆ.[2]

**2. ಆಸ ಮತ್ತು ಯೆಹೋಷಾಫಾಟರ ಕೆಳಗೆ ಪುನರುಜ್ಜೀವನ.**-*a. ಸುಧಾರಣೆಗಳು.*-ಶುದ್ಧತೆಯಲ್ಲಿಯೂ ಶಕ್ತಿಯಲ್ಲಿಯೂ ಹಿಂದಿನ ಇಬ್ಬರಿಗೆ ವಿರುದ್ಧವಾದ ರೀತಿಯಲ್ಲಿ ಆಸನ ಆಳ್ವಿಕೆಯ ನಾಲ್ವತ್ತೊಂದು ವರ್ಷಗಳ ಆಳ್ವಿಕೆಯು ಗುರುತಿಸಲ್ಪಟ್ಟಿತು. ಹಲವಾರು ವರ್ಷಗಳ ವರೆಗೆ ಅವನು ಅಗಾಧವಾದ ಸಮಾಧಾನವನ್ನು ಅನುಭವಿಸಿದನು, ಮೂರ್ತಿ ಪೂಜೆಯ ಬಲಿಪೀಠಗಳೂ ವಿಗ್ರಹಗಳೂ ತೆಗೆದು ಹಾಕಲ್ಪಡುವುದರಿಂದಲೂ ಯೆಹೋವನ ಆರಾದನೆಯನ್ನು ಪುನಃ ಸ್ಥಾಪಿಸುವುದರಿಂದಲೂ ಅವನು ಸುಧಾರಿಸಿದನು. ಯೆಹೋಷಾಫಾಟನು ನೀತಿಯಿಂದ ಇಪ್ಪತ್ತೈದು ವರ್ಷಗಳವರೆಗೆ ಆಳ್ವಿಕೆ ಮಾಡಿದನು. ಅವನು ತನ್ನ ತಂದೆಯ ಸುಧಾರಣೆಗಳನ್ನು ಮುಂದುವರಿಸಿಕೊಂಡು ಹೋದನು. ಕ್ರಮಪ್ರಕಾರ ವಾದ ಧಾರ್ಮಿಕ ಬೋಧನೆಯನ್ನು ಒದಗಿಸಿಕೊಟ್ಟನು, ಮತ್ತು ನ್ಯಾಯ ಪದ್ಧತಿಯನ್ನು ಪುನಃ ಸ್ಥಾಪಿಸಿ ಸುಧಾರಿಸಿದನು.

*b. ಇತಿಯೋಪ್ಯದವನಾದ ಜೆರಹನ ದಾಳಿ.*-ಆಸನ ಸಮಾಧಾನವು ಜೆರಹನ ಕೈಕೆಳಗೆ ಒಂದು ಮಿಲಿಯ ಇತಿಯೋಪ್ಯದವರ ದಾಳಿಯಿಂದ ಮುರಿದು ಹೋಯಿತು. ಯಥಾರ್ಥವಾದ ಪ್ರಾರ್ಥನೆಯೊಂದಿಗೆ ಆಸನು ಯುದ್ಧಕ್ಕೆ ಹೋದನು, ಮತ್ತು ಮುನ್ನೂರು ವರ್ಷಗಳ ವರೆಗೆ ಮುಂದೆ ಯಾವ ದಾಳಿಯನ್ನೂ ಸಹಿಸದಂತೆ ಅಂಥ ನಿರ್ಣಾಯಕವಾದ ಜಯವನ್ನು ಹೊಂದಿದನು. ಒಂದು ಮಹಾ ಸಮ್ಮೇಳನದಿಂದ ಆಸನು ಜಯವನ್ನು ಹೊಂದಿದನು. ಒಂದು ಮಹಾ ಸಮ್ಮೇಳನದಿಂದ ಆಸನು ಜಯವನ್ನು ಆಚರಿಸಿದನು, ಅದರಲ್ಲಿ ಜಾನಾಂಗಿಕ ಒಡಂಬಡಿಕೆಯು ನವೀಕರಿಸಲ್ಪಟ್ಟಿತು ಮತ್ತು ಸುಧಾರಣೆಯ

ಕಾರ್ಯವು ಇನ್ನೂ ಹೆಚ್ಚಾಗಿ ಮುಂದುವರಿಸಲ್ಪಟ್ಟಿತು.

*c. ವಿವಾಹದ ಒಪ್ಪಂದ.*-ತನ್ನ ಜೀವನದ ಅನಂತರದ ಭಾಗದಲ್ಲಿ ಆಸನು ಇಸ್ರಾಯೇಲಿಗೆ ವಿರುದ್ಧವಾಗಿ ಸಿರಿಯದೊಂದಿಗೆ ಒಪ್ಪಂದ ಮಾಡಿಕೊಂಡನು. ಯೆಹೋಷಾಫಾಟನು ಇಸ್ರಾಯೇಲಿನೊಂದಿಗೆ ತನ್ನ ತಂದೆಯ ರಾಜನೀತಿಯನ್ನು ತಿರುಗಿ ಒಪ್ಪಂದ ಮಾಡಿಕೊಂಡನು, ತನ್ನ ಮಗನನ್ನು ಆಹಾಬನ ಮಗಳಿಗೆ ಮದುವೆ ಮಾಡಿಕೊಟ್ಟನು, ಆಹಾಬನಿಗೆ ಸಿರಿಯನ್ನರ ವಿರುದ್ಧ ಸಹಾಯ ಮಾಡಿದನು.

## II. ಎರಡನೆಯ ಅವನತಿ ಮತ್ತು ಪುನರುಜ್ಜೀವನ.

### ಒಂಭತ್ತು ಆಳ್ವಿಕೆಗಳು, ಎರಡನೂರು ವರ್ಷಗಳು.

**1. ಅವನತಿ.**-*a. ಯಹೋರಾಮ ಮತ್ತು ಅತಲ್ಯಳು.*-ಯೆಹೋಷಾಫಾಟನ ಮಗ ಯೆಹೋರಾಮನು ಅರಸನಾದನು. ಅವನು ಆಹಾಬನ ಮಗಳಾದ ಅತಲ್ಯಳನ್ನು ಮದುವೆಯಾಗಿದ್ದನು, ಆಕೆಯು ತನ್ನ ತಾಯಿ ಈಜಬೇಲಳ ಉಗ್ರವಾದ ಆತ್ಮವನ್ನೂ, ಬಾಳನ ಆರಾಧನೆಯನ್ನೂ ಯೆಹೂದದೊಳಗೆ ತಂದಿದ್ದಳು. ಆಸನ ಮತ್ತು ಯೆಹೋಷಾಪಾಟನ ಕಾರ್ಯಗಳು ತೆಗೆದು ಹಾಕಲ್ಪಡುವಂತೆ ತೋರಿತು. ಎಂಟು ವರ್ಷಗಳ ನಂತರ ಯೆಹೋರಾಮನ ತರುವಾಯ ಅವನ ಮಗ ಅಹಜ್ಯನು ಅರಸನಾದನು; ಆದರೆ ಒಂದು ವರ್ಷದೊಳಗಾಗಿ ಆಹಾಬನ ಮನೆಯ ಮೇಲೆ ಇಸ್ರಾಯೇಲಿನ ಯೇಹುವಿನಿಂದ ಬಂದ ಕರುಣೆಯಿಲ್ಲದ ನಾಶನದಲ್ಲಿ ಇಲ್ಲವಾಗಿ ಹೋದನು, ಅತಲ್ಯಳು ತಪ್ಪಿಸಿಕೊಂಡಳು, ಆಡಳಿತವನ್ನು ಹಿಡದುಕೊಂಡಳು, ಯೆಹೋವಾಷನನ್ನು ಬಿಟ್ಟು ರಾಜವಂಶದ ಎಲ್ಲಾ ಮಕ್ಕಳನ್ನು ಕೊಂದುಹಾಕಿದಳು. ಆರು ವರ್ಷಗಳವರೆಗೆ ಆಕೆ ಯೆಹೂದದ ಈಜಬೇಲಳಿಗಿಂತ ಹೆಚ್ಚಾಗಿದ್ದಳು. ದಾವೀದನ ವಂಶವು ಈಗ ಒಂದು ಶಿಶುವಿಗೆ ಕೆಳಗಿಳಿಸಲ್ಪಟ್ಟಿತು, ಆಗ ಅನ್ಯಜನಾಂಗದ ರಾಣಿ ಸಿಂಹಾಸನದ ಮೇಲಿದ್ದಳು; ದಾವೀದನ ವಂಶವು ಅಳಿದು ಹೋಗುವದರಲ್ಲಿತ್ತು; ಯೆಹೋಷಾಪಾಟನ ತಪ್ಪಾದ ಮದುವೆಯ ರಾಜಕಾರಣದ ಫಲವು ಅಷ್ಟು ಕಹಿಯಾದದ್ದಾಗಿತ್ತು.

*b. ಯೆಹೋವಾಷನು ಮತ್ತು ಪ್ರತಿಕ್ರಿಯೆಯು.*-ಪ್ರಾಯದ ಮಹಾ ಯಾಜಕ ಯೆಹೋಯಾದನು ಬಾಲಕ ಯೆಹೋವಾಷನನ್ನು ಸಿಂಹಾಸನದ ಮೇಲೆ ಕೂಡ್ರಿಸಿದಾಗ, ಗದ್ದಲದಲ್ಲಿ ಅತಲ್ಯಳು ಅಂತಿಮವಾಗಿ ಕೊಲ್ಲಲ್ಪಟ್ಟಳು. ಕೆಲವು ವರ್ಷಗಳ ವರೆಗೆ ರಾಜ್ಯವು ಹೆಚ್ಚು ಶುದ್ಧವಾದ ದಿನಗಳ ಕಡೆಗೆ ಹಿಂದಿರುಗಿ ಒಯ್ಯಲ್ಪಡುತ್ತಿರವುದೋ ಎಂಬಂತೆ ತೋರಿತು; ಆದರೆ ಯೆಹೋಯಾದನ ಮರಣದ ನಂತರ, ಅಧೋಗತಿಯ ಪ್ರವೃತ್ತಿಗಳು ಪುನಃ ಬೆಳೆದವು, ಮತ್ತು ಪ್ರವಾದಿ ಜೆಕರ್ಯನು ಯೆಹೋವಾಷನ ಅಪ್ಪಣೆಯಿಂದ ಕೊಲ್ಲಲ್ಪಟ್ಟನು.

*c. ಉಜ್ಜೀಯನು.*-ಅನಂತರ ಬಂದ ಮೂವರು ಅಮಚ್ಯ, ಉಜ್ಜೀಯ ಹಾಗೂ ಯೋತಾಮರ ಆಳ್ವಿಕೆಗಳಲ್ಲಿ, ಉಜ್ಜೀಯನ ಆಳ್ವಿಕೆಯು ಅತೀ ಹೆಚ್ಚು ಗಮನಾರ್ಹವಾದದ್ದಾಗಿದೆ. ಅದು ಬಲವಾದ ಮತ್ತು ಹೆಚ್ಚಾಗಿ ಸಮೃದ್ಧಿಯುಳ್ಳ ಐವತ್ತೆರಡು ವರ್ಷಗಳ ಆಳ್ವಿಕೆಯಾಗಿತ್ತು, ಅವನ ಯಶಸ್ಸುಗಳೇ ಅವನ ಅವನತಿಯಾದವು. ಧೂಪ ಅರ್ಪಿಸುವೆನೆಂದು ಕಲ್ಪಿಸಿಕೊಂಡು, ಅರಸರ ಕರ್ತವ್ಯವಾಗಿದೆ, ಆದರೆ ಯಾಜಕರ ಕಾರ್ಯವಾಗಿದ್ದನ್ನು ಮಾಡಿದಾಗ ಕುಷ್ಟರೋಗಕ್ಕೆ ಬಲಿಯಾದನು. ಅದರಿಂದ ಅವನು ಎಂದೂ ಸುಧಾರಿಸಿಕೊಳ್ಳಲೇ ಇಲ್ಲ.

*d. ಆಹಜನು ಮತ್ತು ಧರ್ಮಭ್ರಷ್ಟತೆ.*-ವಿಗ್ರಹಾರಾಧನೆಯ ಪ್ರಭಾವಗಳು ಆಳವಾಗುತ್ತ,

ಆಹಾಜನ ಆಳ್ವಿಕೆಯಲ್ಲಿ, ಅವು ಬಹಿರಂಗ ಹಾಗೂ ಸರ್ವಜನಿಕ ಧರ್ಮಭ್ರಷ್ಟತೆಯಾಗಿ ಬಹಿರಂಗಗೊಂಡವು. ಎಲ್ಲಾ ಕಡೆಗಳಲ್ಲಿ ವಿಗ್ರಹಗಳಿಂದ ಮತ್ತು ಬಾಳನ ಯಜ್ಞವೇದಿ ಗಳಿಂದ ಸಂತೃಪ್ತನಾಗದೇ "ಅವನು ತನ್ನ ಮಕ್ಕಳು ಬೆಂಕಿಯ ಮೂಲಕ ದಾಟಿ ಹೋಗು ವಂತೆ"[3] ಮಾಡಿದನು ಅಂದರೆ ಮೊಲೊಖ ದೇವತೆಗೆ ಬಲಿ ಅರ್ಪಿಸಿದನು. ನೈತಿಕ ಅಧಪತನವು ರಾಜಕೀಯ ಅವನತಿಯನ್ನು ಅನುಸರಿಸಿತು. ಎದೋಮ್ಯರಿಂದ, ಫಿಲಿಷ್ಟಿಯರಿಂದ, ಸಿರಿಯನ್ನರಿಂದ ಮತ್ತು ಈಗ ಅವನಿತಿಗೆ ಸಮೀಪಿಸಿದ ಇಸ್ರಾಯೇ ಲಿನಿಂದ ವಿರೋಧಿಸಲ್ಪಟ್ಟು, ಅತೀದೊಡ್ಡ ಮೊತ್ತದ ಕಪ್ಪವನ್ನು ಕೊಟ್ಟು ಆಹಾಜನು ಆಗ ತನ್ನ ಬಲದ ಪರಾಕಾಷ್ಠತೆಯಲ್ಲಿದ್ದ ಅಶ್ಶೂರ್ಯರ್ದೊಂದಿಗೆ ರಕ್ಷಣಾತ್ಮಕ ಒಪ್ಪಂದ ಮಾಡಿಕೊಂಡನು.

**2. ಹಿಜ್ಕೀಯನ ಆಳ್ವಿಕೆಯಲ್ಲಿ ಪುನರುಜ್ಜೀವನ.**-*a. ಯೆಶಾಯ ಮತ್ತು ಸುಧಾರಣೆ*-ಯೆಹೂದದ ಮೊದಲಿನ ಪ್ರವಾದಿಗಳ ಅವಧಿಗೆ ನಾವು ತಲುಪಿದ್ದೇವೆ, ಅವರ ಬರಹಗಳು ನಮಗೆ ಬಂದಿರುತ್ತವೆ: ಯೋವೇಲ, ಆಮೋಸ, ಮೀಕ, ನಹೂಮ ಮತ್ತು ಯೆಶಾಯ. ಯೆಶಾಯನ ಪ್ರವಾದನೆಯ ಬರಹಗಳು "ಐದನೆಯ ಸುವಾರ್ತೆ" ಎಂದು ಕರೆಯಲ್ಪಟ್ಟಿವೆ, ಅವನು ನಮ್ಮ ನಾಲ್ಕು ಕ್ಷೇತ್ರಗಳ ಭಾಗಗಳಲ್ಲಿ ಪ್ರಸಂಗಿಸಿದನು ಉಪದೇಶ ಮಾಡಿದನು ಮತ್ತು ಪ್ರವಾದನೆ ಹೇಳಿದನು. ಅವನು ಹಿಜ್ಕೀಯನ ಆಳ್ವಿಕೆಯಲ್ಲಿ ಅತೀ ಪ್ರಸಿದ್ಧನಾದ ವ್ಯಕ್ತಿಯಾಗಿದ್ದನು. ಅವನು ಯೆಹೂದದ ಮೊದಲನೆಯ ಪ್ರವಾದಿಯಾಗಿದ್ದು ಯಾಜಕ ಮತ್ತು ಅರಸ ಇಬ್ಬರ ಛಾಯೆಯಾಗಿದ್ದಾನೆ. ಇಸ್ರಾಯೇಲಿನಲ್ಲಿ ಎಲೀಯ ಮತ್ತು ಎಲೀಷರು ತಮ್ಮ ಪರಾಕ್ರಮ ವ್ಯಕ್ತಿತ್ವಗಳೊಂದಿಗೆ ಹೋಲಿಕೆಯಲ್ಲಿ ಅರಸರುಗಳನ್ನು ಕುಳ್ಳರನ್ನಾಗಿ ಮಾಡಿದ್ದಾರೆ. ಯೆಹೂದದಲ್ಲಿ ತಕ್ಕ ಸ್ಥಳವನ್ನು ತುಂಬಲು ಯೆಶಾಯನು ಮೊದಲಿಗನಾಗಿದ್ದಾನೆ. ಅವನು ಪ್ರವಾದಿಯಂತೆ ರಾಜಕಾರಣಿಯೂ ಹೌದು, ಅರಮನೆಯಲ್ಲಿ ಹೆಚ್ಚಾಗಿ ಕಾಣಿಸಿಕೊಂಡನು. ಅವನ ಉರಿಯುತ್ತಿರುವ ಮಾತುಗಳು ಆಹಾಜನ ಆಳ್ವಿಕೆಯಲ್ಲಿ ಕಳೆದು ಹೋದಂತೆ ತೋರಿದರೂ, ಅವು ಕೊನೆಗೆ ಫಲಕೊಟ್ಟವು. ಉತ್ತರ ರಾಜ್ಯವು ಅಸ್ಸೀರಿಯದೊಂದಿಗೆ ತನ್ನ ಮರಣ ಹೋರಾಟದಲ್ಲಿದ್ದಾಗ, ಹಿಜ್ಕೀಯನು ಯೆಶಾಯನ ಸಲಹೆಯಿಂದ ಪ್ರೇರೇಪಿತನಾಗಿ, ಧಾರ್ಮಿಕ ಸುಧಾರಣೆಗಳನ್ನು ಯೆಹೂದಕ್ಕೆ ಕೊಡುತ್ತ ಅದಕ್ಕೆ ಜೀವನದ ಹೊಸ ಅವಕಾಶಕೊಡುತ್ತಿದ್ದನು. ದಾವೀದನ ದಿನಗಳು ನಂತರದಿಂದ ಅದರ ಪ್ರಗತಿಯಲ್ಲಿ ಉದ್ದೇಶದಲ್ಲಿ ಅಷ್ಟು ಶುದ್ಧತೆಯಿಂದ ಸಿಂಹಾಸನದ ಮೇಲೆ ಕುಳಿತ ಯಾವ ಅರಸನೂ ಇರುವುದಿಲ್ಲ, ಅಸಹ್ಯ ಬಾಳನ ಆರಾಧನೆ ಮತ್ತು ಭಯಂಕರವಾದ ಮೊಲೋಖನ ಆಚರಣೆಗಳು ಯೆಹೋವನ ಆರಾಧನೆಗೆ ದಾರಿ ಬಿಟ್ಟುಕೊಟ್ಟವು. ಮೋಶೆಯಿಂದ ಮಾಡಲ್ಪಟ್ಟ ತಾಮ್ರದ ಸರ್ಪವನ್ನು ಅವನು ನಾಶಪಡಿಸಿದನು, ಅದು ವಿಗ್ರಹಾರಾಧನೆಯ ವಸ್ತುವಾಗಿತ್ತು. ಯೆರೂಸಲೇಮಿನಲ್ಲಿ ಪಸ್ಕ ಹಬ್ಬವನ್ನು ಪುನಃಸ್ಥಾಪಸಿದನು. ಆಚರಣೆಯಲ್ಲಿ ಭಾಗವಹಿಸುವುದಕ್ಕೆ ಇಸ್ರಾಯೇಲಿನಲ್ಲಿ ಉಳಿದಿದ್ದವರನ್ನು ಆಮಂತ್ರಿಸಿದನು.

*b.* ಸನ್ಹೇರಿಬನ ದಂಡಯಾತ್ರೆ.-ಈ ಆಳ್ವಿಕೆಗೆ ಅಸ್ಸೀರಿಯದ, ಸನ್ಹೇರಿನ ಪ್ರಸಿದ್ಧ ದಾಳಿಯು ಒಳಪಟ್ಟಿರುತ್ತದೆ. ಆಹಾಜನು ಅಸ್ಸೀರಿಯಕ್ಕೆ ಕಪ್ಪಕೊಡುವವನಾಗಿದ್ದನು; ಆದರೆ ಹಿಜ್ಕೀಯನು, ಯೆಶಾಯನ ಬುದ್ಧಿವಾದಕ್ಕೆ ವಿರುದ್ಧವಾಗಿ, ಅಸ್ಸೀರಿಯನ್ನರನ್ನು ಐಗುಪ್ತದ ಒಪ್ಪಂದಕ್ಕಾಗಿ ಬದಲಾಯಿಸಿಕೊಂಡು, ಕಪ್ಪಕೊಡುವದನ್ನು ನಿರಾಕರಿಸಿದನು. ಸನ್ಹೇರಿಬನು ಯೆಹೂದದ ಮೇಲೆ ದಾಳಿಮಾಡಿದನು, ಅನೇಕ ಪಟ್ಟಣಗಳನ್ನು ವಶಪಡಿಸಿಕೊಂಡನು, ಎರಡುನೂರು ಸಾವಿರ ಜನರನ್ನು ಸೆರೆಯಾಗಿ ಒಯ್ದನು. ಮತ್ತು ಯೆರೂಸಲೇಮಿಗೆ ಮುತ್ತಿಗೆ ಹಾಕಿದನು. ಭಯಪಡಿಸಲ್ಪಟ್ಟ ಐಗುಪ್ತದ ದಾಳಿಯಿಂದ

ಅವನು ಹಿಂದಕ್ಕೆ ಹೋದನು, ಮತ್ತು ರಹಸ್ಯವಾದ ಅವಘಡದಿಂದ, ಒಂದನೂರ ಎಂಭತ್ತೈದು ಸಾವಿರ ಜನರನ್ನು ಒಂದೇ ರಾತ್ರಿಯಲ್ಲಿ ಕಳೆದುಕೊಂಡನು. "ಮಂದೆಯ ಮೇಲೆ ತೋಳದಂತೆ ಅಸ್ಸೀರಿಯನ್ನರು" ಎಂದು ಪ್ರಾರಂಭಿಸುವ ಪದ್ಯದಲ್ಲಿ ಬೈರನ್ನನು ಈ ಘಟನೆಯನ್ನು ವಿವರಿಸಿದ್ದಾನೆ. ನಿನೆವೆಯಲ್ಲಿಯ ಸನ್ಹೆರಿಬನ ಶಿಲಾ ಲೇಖನಗಳು ಅವನ ಯಶಸ್ಸುಗಳನ್ನು ಜ್ಞಾಪಿಸಿಕೊಳ್ಳುತ್ತವೆ ಆದರೆ ಈ ಅವಘಡವನ್ನು ನಮೂದಿಸುವುದಿಲ್ಲ, ಆದರೆ ಹೆರೊಡೊಟಸನು ಇದನ್ನು ಉಲ್ಲೇಖಿಸುತ್ತಾನೆ.

## III. ಮೂರನೆಯ ಅವನತಿ ಮತ್ತು ಪುನರುಜ್ಜೀವನ.

### ಮೂರು ಆಳ್ವಿಕೆಗಳು, ತೊಂಭತ್ತು ವರ್ಷಗಳು.

**1. ಮನಸ್ಸೆ ಮತ್ತು ಆಮೊನರ ಆಳ್ವಿಕೆಯಲ್ಲಿ ಅವನತಿ.**-ಹಿಜ್ಕೀಯನ ಮತ್ತು ಯೆಶಾಯನ ಸುಧಾರಣೆಗಳು ಕೇವಲ ತಾತ್ಕಲಿಕವಾದಂತೆ ರುಜುವಾತಾದವು. ಎಲ್ಲಾ ಸಮಯದಲ್ಲಿ ವಿಗ್ರಹಾರಾಧಕ ಅರಮನೆಯ ಗುಂಪು ಇತ್ತೆಂಬುದರಲ್ಲಿ ಸಂಶಯವಿಲ್ಲ. ಹಿಜ್ಕೀಯನ ಮರಣದಲ್ಲಿ ಅವರು ಮೇಲ್ಮೈಯನ್ನು ಸಾಧಿಸಿತು ಮತ್ತು ಅವನ ಮಗ ಮನಾಸ್ಸೆಯ ಆಳ್ವಿಕೆಯಲ್ಲಿ ಅವನು ಐವತ್ತೈದು ವರ್ಷ ಆಳ್ವಿಕೆಮಾಡಿದನು, ದೇಶವು ಹೆಚ್ಚು ಬೇಗನೇ ಅಧೋ ಗತಿಯ ಮಾರ್ಗ ಹಿಡಿಯಿತು. ತಿಳಿದ ಎಲ್ಲಾ ರೀತಿಯ ವಿಗ್ರಹಾರಧನೆಗಳು ಸ್ವೀಕರಿಸಲ್ಪಟ್ಟಂತೆ ತೋರುತ್ತದೆ; ಬಾಳನ ಆರಾಧನೆ, ಮೊಲೊಖನ ಆರಾಧನೆ, ಕಲ್ದೀಯರ ನಕ್ಷತ್ರಪೂಜೆ, ಮಾಟಮಂತ್ರವಿದ್ಯೆ, ಯೆರೂಸಲೇಮನ್ನು ರಕ್ತದಿಂದ ತುಂಬಿಸಿದ ಕ್ರೂರವಾದ ಹಿಂಸೆ - ಅಂಥವುಗಳು ಈ ದೀರ್ಘ ಆಳ್ವಿಕೆಯ ಅಪರಾಧಗಳಾಗಿದ್ದವು, ಯೆಹೂದಿ ಸಾಂಪ್ರಾದಾಯವು ನಂಬಲ್ಪಟ್ಟರೆ, ಯೆಶಾಯನು ಈ ಸಮಯದಲ್ಲಿ ಹತಸಾಕ್ಷಿಯಾದನು. ಬಬಿಲೋನಿನಲ್ಲಿ ಮನಾಸ್ಸೆಯ ತಾತ್ಕಾಲಿಕ ಸೆರೆಯು ಅವನನ್ನು ಸ್ವಸ್ಥಚಿತ್ತನನ್ನಾಗಿ ಮಾಡಿತು ಮತ್ತು ವಿಗ್ರಹಾರಧನೆಯನ್ನು ಸ್ವಲ್ಪ ನಿಯಂತ್ರಿಸಿತು; ಆದರೆ ಅವನ ಮಗ, ಆಮೋನನು ತನ್ನ ತಂದೆಯ ಅತೀ ಕೆಟ್ಟ ಆಚಾರಗಳನ್ನು ಅನುಕರಿಸಿದನು; ಮತ್ತು ಒಂದು ದಂಗೆಯಲ್ಲಿ ನಾಶವಾಗಿ ಹೋದನು.

**2. ಯೋಷೀಯನ ಆಳ್ವಿಕೆಯಲ್ಲಿ ಪುನರುಜ್ಜೀವನ.**-*a. ಯೆರೆಮೀಯ ಮತ್ತು ಸುಧಾರಣೆಗಳು.*-ಆಮೊನನ ಮರಣವು ಎಂಟು ವರ್ಷ ವಯಸ್ಸಿನ ಬಾಲಕ ಯೋಷೀಯನು ಪಟ್ಟಣಕ್ಕೆ ಬಂದನು. ಮೂವತ್ತೊಂದು ವರ್ಷಗಳ ಅವನ ಆಳ್ವಿಕೆಯು ಚಿಕ್ಕ ರಾಜ್ಯಕ್ಕೆ ಸೂರ್ಯಪ್ರಕಾಶದ ಕೊನೆಯ ಕಿರಣವಾಗಿತ್ತು. ಅವನು ಹಿಜ್ಕೀಯನೊಂದಿಗೆ ಒಬ್ಬ ರಾಜಸುಧಾರಕನಂತೆ ಎಣಿಸಲ್ಪಡುತ್ತಾನೆ; ಮತ್ತು ಒಂದು ರೀತಿಯಲ್ಲಿ ಹಿಜ್ಕೀಯನಿಗೆ ಯೆಶಾಯನು ಇದ್ದಂತೆ, ಯೆರೆಮೀಯನು ಇವನಿಗಿದ್ದನು. ಮೊದಲಿನ ಸುಧಾರಣೆಗಳು ಪ್ರವಾದಿನಿ ಹುಲ್ದಳಿಂದ ಪ್ರೇರೇಪಿಸಲ್ಪಟ್ಟಿದ್ದಂತೆ ತೋರುತ್ತದೆ, ಯೆರೆಮೀಯನ ಅತಿದೊಡ್ಡ ಚಟುವಟಿಕೆಯು ಕತ್ತಲೆಯಾಗುತ್ತಿರುವ ವರ್ಷಗಳಲ್ಲಿ ಯೋಷೀಯನ ಮರಣವನ್ನು ಹಿಂಬಾಲಿಸಿತು. ಹದಿನಾರನೇ ವಯಸ್ಸಿನಲ್ಲಿ ಯೋಷೀಯನು ಆಡಳಿತವನ್ನು ತನ್ನ ಕೈಗಳಿಗೆ ತೆಗೆದುಕೊಂಡಂತೆ ಕಾಣುತ್ತದೆ, ಮತ್ತು ವೈಯಕ್ತಿಕವಾಗಿ ದೇವರ ಕಡೆಗೆ ತಿರುಗಿಕೊಂಡನು; ಇಪ್ಪತ್ತನೆಯ ವಯಸ್ಸಿನಲ್ಲಿ, ಯೆರೂಸಲೇಮನ್ನು ವಿಗ್ರಹಾರಾಧನೆಯಿಂದ ಶುದ್ಧೀಕರಿಸಿದನು; ಇಪ್ಪತ್ತಾರನೆಯ ವಯಸ್ಸಿನಲ್ಲಿ, ದೇವಾಲಯದ ದುರಸ್ತಿಯನ್ನು ತೆಗೆದು ಕೊಂಡನು. ದುರಸ್ತಿ ಕಾರ್ಯ ನಡೆದಾಗ ಧರ್ಮಶಾಸ್ತ್ರದ ಒಂದು ಪ್ರತಿಯು ದೊರೆಯಿತು. ಅದು ಮನಾಸ್ಸೆಯ ದೀರ್ಘವಾದ, ಕತ್ತಲೆಯ ಆಳ್ವಿಕೆಯಲ್ಲಿ ಕಳೆದು ಹೋಗಿದ್ದಂತೆ ತೋರುತ್ತದೆ. ಆದರ ಬೋಧನೆಗಳಿಂದ ಮತ್ತು ಗಂಭೀರವಾದ ಎಚ್ಚರಿಕೆಗಳಿಂದ

ಪ್ರೇರೇಪಿಸಲ್ಪಟ್ಟು, ಅವನು ಸಮುವೇಲನ ದಿನಗಳಿಂದ ಇದ್ದ ಪ್ರಸಿದ್ಧ ಪಸ್ಕವನ್ನು ಕೈಕೊಂಡನು. ಅಸ್ಸೀರಿಯವು ಈಗ ಅವನಿತಿಗಳಿಯುತ್ತಿತ್ತು, ಮತ್ತು ಯೋಷೀಯನು ಹತ್ತು ಕುಲಗಳ ಹಳೇ ಕ್ಷೇತ್ರದ ಮೇಲೆ ತನ್ನ ಅಧಿಕಾರವನ್ನು ವಿಸ್ತರಿಸಿದನು; ಕನಿಷ್ಠವಾಗಿಯಾದರೂ ಬೇತೇಲಿನಲ್ಲಿಯ ಮತ್ತು ಸಮಾರ್ಯದಲ್ಲಿಯ ಇರುವ ಪಟ್ಟಣಗಳಲ್ಲಿ ಕರುವಿನ ಆರಾಧನೆಯನ್ನು ತೆಗೆದು ಹಾಕಿದನು ಮತ್ತು ಸುಧಾರಣೆಯ ಕೆಲಸ ಮೇಲ್ವಿಚಾರಣೆ ಮಾಡಲು ರಾಜ್ಯದಲ್ಲೆಲ್ಲಾ ವೈಯಕ್ತಿಕವಾಗಿ ಸಂಚರಿಸಿದನು.

*b. ಮೆಗಿದ್ದೋವಿನ ಕಾಳಗ.*-ಯೋಷೀಯನ ಉನ್ನತಿಯಾಗುತ್ತಿದ್ದ ಆಳ್ವಿಕೆಯು ನಾಶನಕರ ಅಂತ್ಯಹೊಂದಿತು. ದೊಡ್ಡ ಅಸ್ಸೀರಿಯನ್ ಮತ್ತು ಐಗುಪ್ತದ ಸಾಮ್ರಾಜ್ಯಗಳು ಪುನಃ ಯುದ್ಧದಲ್ಲಿ ತೊಡಗಿದವು. ಪರೋಹನೇಕನು ಮೇಲಿನ ಯೂಫ್ರೇಟೀಸ್‌ದ ಮೇಲೆ ಕಾರ್ಕೆಮಿಷನ್ನು ವಶಪಡಿಸಿಕೊಳ್ಳಲು ದಾರಿಯಲ್ಲಿ ಇದ್ದನು. ಯೋಷೀಯನು ಬುದ್ಧಿಹೀನತೆಯಿಂದ ಮಧ್ಯೆಪ್ರವೇಶಿಸಿದನು, ಮತ್ತು ಮೆಗಿದ್ದೋವಿನ ಯುದ್ಧದಲ್ಲಿ ತನ್ನ ಪ್ರಾಣಕಳೆದು ಕೊಂಡನು. ಯೋಷೀಯ ಮರಣವು ಯೆಹೂದದ ನಾಶನವನ್ನು ರುಜುವಾತು ಪಡಿಸಿತು. ಅವನು "ದಾವೀದನ ಮಾರ್ಗಗಳಲ್ಲಿ ನಡೆದು,"[4] ಕೊನೆಯ ಅರಸನಾಗಿದ್ದನು. ಮತ್ತು ಜನಾಂಗಿಕ ಒಡಂಬಡಿಕೆಗೆ ನಿಷ್ಠೆಯಿಂದ ಇದ್ದನು. ಯೆರೆಮೀಯನ ದುಃಖವು ದೊಡ್ಡದಾಗಿತ್ತು, ಒಳ್ಳೇ ಅರಸನ ಮೇಲಿನ ಒಂದು ಶೋಕ ಗೀತೆಯಲ್ಲಿ ವ್ಯಕ್ತಿಪಡಿಸಲ್ಪಟ್ಟಿದೆ.

## IV. ಅಂತಿಮ ಅವನತಿ ಮತ್ತು ಸೆರೆಹೋಗುವಿಕೆ.

**1. ನೈತಿಕ ಅವನತಿ.**-ಯೋಷೀಯನ ಸುಧಾರಣೆಗಳು ದೇಶದ ನಂಬಿಕೆಗಳಲ್ಲಿ ವಿಶಾಲವಾಗಿ ದೃಢವಾಗಿ ಬೇರೂರಲ್ಪಡಲಿಲ್ಲ. ಅವು ರಾಜಕೀಯ ಅಧಿಕಾರದಿಂದ ಒತ್ತಾಯವಾಗಿ ಹೊರಿಸಲ್ಪಟ್ಟಿದ್ದವು ಮತ್ತು ಅಧಿಕಾರವು ಹಿಂತೆಗೆದುಕೊಳ್ಳಲ್ಪಟ್ಟ ಕೂಡಲೇ ಬಿದ್ದು ಹೋದವು. ಆಯ್ಕೆ ಮಾಡಲ್ಪಟ್ಟ ಒಂದು ಸಣ್ಣ ಗುಂಪು ಇತ್ತು, ಯೆರೆಮೀಯನು ಅದರ ಪ್ರಾಣವಾಗಿದ್ದನು, ಮತ್ತು ಯುವಕನಾದ ದಾನಿಯೇಲ ಹಾಗೂ ಅವನ ಜೊತೆಗಾರರು ಒಳಗೊಂಡಿದ್ದರು, ಭವಿಷ್ಯದ ದೇಶೀಯ ಜೀವನದ ನಿಜವಾದ ಇಸ್ರಾಯೇಲಿನ ಜೀವನದ ರಚನೆಯಾಗಿದ್ದರು; ಆದರೆ ದೇಶದ ಹೆಚ್ಚಾದ ಜನಸಮೂಹವು ನಿರೀಕ್ಷೆಯಿಲ್ಲದಷ್ಟು ಕೆಟ್ಟುಹೋಗಿತ್ತು. ಯೆಶಾಯನೂ ಸಹ ಒಂದು ನೂರು ವರ್ಷಗಳ ಮೊದಲು, ಹೀಗೆ ಬರೆದಿದ್ದನು. "ಪಾಪಿಷ್ಠ ಜನವೇ, ಅಧರ್ಮಭಾರ ಹೊತ್ತಿರುವ ಪ್ರಜೆಯೇ, ದುಷ್ಟಜಾತಿಯೇ, ದ್ರೋಹಿಗಳಾದ ಮಕ್ಕಳೇ, ... ತಲೆಯೆಲ್ಲಾ ರೋಗ, ಹೃದಯವೆಲ್ಲಾ ದುರ್ಬಲ. ಅಂಗಾಲಿನಿಂದ ನಡುನೆತ್ತಿಯ ತನಕ ಪೆಟ್ಟು ಬಾಸುಂಡೆ ಮಾಗದ ಗಾಯಗಳೇ ಹೊರತು ಏನೂ ಸೌಖ್ಯವಿಲ್ಲ" (ಯೆಶಾಯ 1:4-6). ಮತ್ತು ಯೆರೆಮೀಯ ಬರಹಗಳು ಈ ಮುಗಿಯುತ್ತಿರುವ ಅವಧಿಯ ಮುಖಾಂತರ ಆಳವಾದ ಕತ್ತಲೆಯನ್ನು ತೋರಿಸುತ್ತವೆ. ವಿಗ್ರಹಾರಾಧನೆ, ಕುಡಿಕತನ, ಅತಿಯಾಶೆ, ಕಾಮ ಹಾಗೂ ಕಠಿಣವಾದ ಹಿಂಸೆ ಇವುಗಳು ಗುಣಲಕ್ಷಣವಾದ ದುರ್ಗುಣಗಳಾಗಿವೆ. ಈ ನೈತಿಕ ಅವನತಿಯು ರಾಜಕೀಯ ವಿಸರ್ಜನೆಯ ಮುಂದೂತನಾಗಿದೆ.

**2. ಗುಲಾಮತನಗಳ ಪರಂಪರೆ.**-ಯೋಷೀಯನ ನಂತರ ನಾಲ್ಕುಜನ ಅರಸರು ಹಿಂಬಾಲಿಸಿದರು; ಯೆಹೋವಾಹಾಜ, ಯೆಹೋವಾಯಾಖೀಮ, ಯೆಹೋಯಾಕೀನ ಮತ್ತು ಚಿದ್ಕೀಯ. ಮೂರನೆಯವನು ಒಳ್ಳೆಯ ಯೋಷೀಯನ ಮೊಮ್ಮಗನು ಮತ್ತು ಇತರರು ಮಕ್ಕಳಾಗಿದ್ದರು, ಎಲ್ಲರೂ ಐಗಪ್ತದ ಇಲ್ಲವೇ ಬಬಿಲೋನಿನ ಕೈಗೊಂಬೆಗಳಾ

ಗಿದ್ದರು; ಯಾಕಂದರೆ ಈ ಅವಧಿಯ ಮೊದಲಿನ ಭಾಗದಲ್ಲಿ ನಿನೆವೆಯು, ಅಸ್ಸೀರಿಯದ ಹೆಮ್ಮೆಯ ರಾಜದಾನಿಯು, ಪಶ್ಚಿಮ ಏಶಿಯಾದ ಮೇಲೆ ಅನೇಕ ಶತಮಾನಗಳ ವರೆಗೆ ಆಳ್ವಿಕೆಮಾಡಿದ್ದ ಮೇದ್ಯ ಮತ್ತು ಬಬಿಲೋನಿನ ಸಂಯುಕ್ತ ದಾಳಿಗಳ ಮುಂದೆ ಮುಳುಗಿ ಹೋಯಿತು. ಅಂದಿನಿಂದ ಮುಂದೆ ಬಬಿಲೋನ ಮತ್ತು ಐಗುಪ್ತಗಳು ಮೇಲ್ಗಡೆಯ ಮತ್ತು ಕೆಳಗಡೆಯ[5] ಬೀಸುವ ಕಲ್ಲುಗಳಾಗಿದ್ದು, ಮಧ್ಯದಲ್ಲಿ ಯೆಹೊದವು ಧೂಳಾಗಿ ಬೀಸಲ್ಪಟ್ಟಿತು. ಫರೋಹನೆರೋನು ಯೆಹೋವಾಜನನ್ನು ತೆಗೆದುಕೊಂಡು ಹೋದನು ಮತ್ತು ಅವನ ಸಹೋದರ ಯೆಹೋಯಾಕೀಮನನ್ನು ಸಿಂಹಾಸನದ ಮೇಲೆ ಇಟ್ಟನು, ಆದರೆ ಬಬಿಲೋನು ಏಶಿಯಾದಲ್ಲಿ ಐಗುಪ್ತವನ್ನು ಪ್ರತಿಸ್ಪರ್ಧಿಯಂತೆ ಸಹಿಸಿಕೊಳ್ಳಲಿಲ್ಲ. ದಾಳಿಗಳ ಪರಂಪರೆಯು ಮತ್ತು ಬಬಿಲೋನಿನ ಬಲಶಾಲಿ ಅರಸ ನೆಬುಕದ್ನೆಚ್ಚರನಿಂದ ಯೂದಾಯವನ್ನು ಸೆರೆಯಾಗಿ ಒಯ್ಯುವದರಿಂದ ನಾಟಕವು ಅಂತ್ಯವಾಯಿತು.

*a. ಮೊದಲನೆಯ ದಾಸತ್ವ.*-ಅವನು ಯೆರೂಸಲೇಮನ್ನು ವಶಪಡಿಸಿಕೊಂಡನು (ಕ್ರಿ.ಪೂ. 606), ಆದರೆ ಅರಸ ಯೆಹೋಯಾಕೀಮನನ್ನು ಉಳಿಸಿದನು. ಕೆಲವೊಂದು ಜನರನ್ನು ಸೆರೆಯಾಗಿ ಒಯ್ಯುವುದರಲ್ಲಿ ತೃಪ್ತಿ ಪಟ್ಟುಕೊಂಡನು. ಅವರಲ್ಲಿ ದಾನಿಯೇಲ, ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋ ಇದ್ದರು. ಅವರು ರಾಜವಂಶದ ರಾಜಕುಮಾರರಾಗಿದ್ದರಿಂದ ಮತ್ತು ಜನಾಂಗಿಕ ಧರ್ಮಕ್ಕೆ ನಿಷ್ಠೆಯುಳ್ಳವರಾಗಿದ್ದದರಿಂದ, ಅರಸನು ಅವರನ್ನು ಹೊರಗೆ ಹಾಕುವಲ್ಲಿ ಸಂತೋಷವುಳ್ಳವನಾದದ್ದರಲ್ಲಿ ಸಂಶಯವಿಲ್ಲ. ಅವನು ತಾನೇ ಹನ್ನೊಂದು ವರ್ಷಗಳ ಆಳ್ವಿಕೆ ನಂತರ ಹಿಂಸಾತ್ಮಕ ಮರಣ ಹೊಂದಿದನು.

*b. ಎರಡನೆಯ ದಾಸತ್ವ.*-597ರಲ್ಲಿ ನಬೂಕದ್ನೆಚ್ಚರನು ಎರಡನೆಯ ದಾಳಿಮಾಡಿದನು, ಮೂವತ್ತೈದು ವರ್ಷಗಳವರೆಗೆ ಸೆರೆಯಾಳಾಗಿಡಲ್ಪಟ್ಟ ಅರಸ ಯೆಹೋಯಾಕೀನನ್ನು ತೆಗೆದುಕೊಂಡು ಹೋದನು. ಅದೇ ಸಮಯದಲ್ಲಿ ಪ್ರವಾದಿ ಯೆಹೆಜ್ಕೇಲನು ಮೇಲಿನ ವರ್ಗಗಳ ಹತ್ತು ಸಾವಿರ ಜನರೊಂದಿಗೆ ಸೆರೆಯಾಗಿ ಹೋದನು, ಚಿದ್ಕೀಯನು ಸಿಂಹಾಸನದ ಮೇಲೆ ಕೂಡ್ರಿಸಲ್ಪಟ್ಟನು ಮತ್ತು ಹನ್ನೊಂದು ವರ್ಷಗಳವರೆಗೆ ಯೂಫ್ರೇಟೀಸಿನ ಮಹಾ ಚಕ್ರವರ್ತಿಯ ಜೀವಿಯಂತೆ ಆಳ್ವಿಕೆ ನಡಿಸಿದನು.

*c. ಮೂರನೆಯ ದಾಸತ್ವ.*-ಈ ಎಲ್ಲಾ ಸಮಯದಲ್ಲಿ ಬಬಿಲೋನಿನ ನೊಗದ ಕೆಳಗೆ ರೋಷಗೊಂಡಿದ್ದ ಮತ್ತು ಐಗುಪ್ತದೊಂದಿಗೆ ಒಪ್ಪಂದಕ್ಕೆ ಮನಸ್ಸುಮಾಡಿದ್ದ ಒಂದು ಐಗುಪ್ತದ ಪಂಗಡವು ಯೆರೂಸಲೇಮಿನಲ್ಲಿತ್ತು, ಜನಾಂಗದ ಮೇಲೆ ನ್ಯಾಯತೀರ್ವಿಕೆಯು ಬಬಿಲೋನಿನಲ್ಲಿ ಎಪ್ಪತ್ತು ವರ್ಷಗಳ ಸೆರೆವಾಸವು ಎಂದು ಯೆರಮೀಯನು ತಿಳಿಸಿದನು ಮತ್ತು ಆ ಬಲಕ್ಕೆ ಅಧೀನರಾಗಬೇಕೆಂದು ಬುದ್ಧಿವಾದ ಹೇಳಿದನು. ಇದಕ್ಕಾಗಿ ಅವನು ಅಸಹ್ಯವಾದ ಕಾರಗ್ರಾಹದೊಳಗೆ ಸೆರೆಯಾಗಿಡಲ್ಪಟ್ಟನು. ಕೊನೆಗೆ ಒಂದು ಹೊಸ ದಂಗೆಯು ನೆಬೂಕದ್ನೆಚ್ಚರನ ಸೈನ್ಯವನ್ನು ಮತ್ತೊಮ್ಮೆ ಯೆಹೂದಕ್ಕೆ ತಂದಿತು, 586ರಲ್ಲಿ, ಯಾತನೆಯ ಮುತ್ತಿಗೆಯ ನಂತರ, ಅವನು ಯೆರೂಸಲೇಮನ್ನು ವಶಪಡಿಸಿಕೊಂಡನು, ಚಿದ್ಕೀಯನ ಮುಂದೆ ಅವನ ಗಂಡುಮಕ್ಕಳನ್ನು ಕೊಲ್ಲಿಸಿದನು, ಅವನ ಕಣ್ಣುಗಳನ್ನು ತೆಗೆದುಹಾಕಿದನು ಮತ್ತು ಅವನನ್ನು ಸರಪಣಿಗಳಿಂದ ಕಟ್ಟಿ ಬಬಿಲೋನಿಗೆ ಒಯ್ದನು. ಪಟ್ಟಣದ ಗೋಡೆಗಳು ಕೆಡವಲ್ಪಟ್ಟವು. ದೇವಾಲಯಕ್ಕೆ ಮತ್ತು ಅರಮನೆಗಳು ಸುಡಲ್ಪಟ್ಟವು, ಮತ್ತು ಮೇಲಿನ ವರ್ಗದವರು ಸೆರೆಯಾಗಿ ಒಯ್ಯಲ್ಪಟ್ಟರು. ಯೆರೂಸಲೇಮ, ದಾವೀದನ ಪಟ್ಟಣವು, ಅಮೂಲ್ಯ ಸ್ಮರಣೆಗಳ ಪಟ್ಟಣವು, ಇನ್ನು ಉಳಿಯಲಿಲ್ಲ. ಕೇವಲ ಕೆಲವೇ ನಂಬಿಗಸ್ಥರ ಹೃದಯಗಳಲ್ಲಿ ಉಳಿಯಿತು. ಅವರು ಎಪ್ಪತ್ತು ವರ್ಷಗಳ ಸೆರೆಯ ಕಾಲದಲ್ಲಿ ಪರಿಶುದ್ಧ ಪಟ್ಟಣಕ್ಕಾಗಿ ಬಯಸಿದರು, ಮತ್ತು

ವಾಗ್ದಾತ್ತ ಹಿಂದಿರುಗುವಿಕೆಯನ್ನು ಮುನ್ನೋಡಿದರು.

---

ಟಿಪ್ಪಣಿಗಳು

[1]ಯಾವುದೇ ವಿವರವಾದ ಮತ್ತು ಸಂಪೂರ್ಣವಾದ ಇಬ್ರಿಯ ಚರಿತ್ರೆಯ ಅಧ್ಯಯನದಲ್ಲಿ ಪ್ರವಾದಿಗಳ ಬರಹಗಳು ಅಧ್ಯಯನ ಮಾಡಲ್ಪಡತಕ್ಕದ್ದು. ಅವು ಜನಾಂಗದ ಪ್ರಾಪಂಚಿಕ ನೈತಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಯ ಮೇಲೆ ಬೆಳಕನ್ನು ಚೆಲ್ಲುವವು. ಪೂರ್ವಕಾಲ ವೃತ್ತಾಂತಗಳು ಬಹುಶಃ ಸೆರೆಯ ನಂತರ ಎಜ್ರನಿಂದ ಬರೆಯಲ್ಪಟ್ಟಿದ್ದು ದಾವೀದನ ಮತ್ತು ಅವನ ವಂಶದ ಇತಿಹಾಸವಾಗಿರುತ್ತದೆ ಎಂಬುದನ್ನು ಗಮನಿಸುವುದು ಯೋಗ್ಯವಾದದ್ದಾಗಿದೆ. ಸೌಲನ ಆಳ್ವಿಕೆ ಮತ್ತು ಉತ್ತರ ರಾಜ್ಯದ ಚರಿತ್ರೆಯು ಸಂಪೂರ್ಣವಾಗಿ ಬಿಡಲ್ಪಟ್ಟಿದೆ. [2]ನೋಡಿರಿ ಎಡರ್ಸ್‌ಹೈಮ, "ಹಿಸ್ಟರಿ ಆಫ್ ಇಸ್ರಾಯೇಲ್ ಆಂಡ್ ಜೂಡಾ," Vol. V., pp. 129, 130. [3]2 ಅರಸುಗಳು 16:3. [4]2 ಅರಸುಗಳು 22:2. [5]ಡೀನ್ ಅವರಲ್ಲಿ "nether" (ಕೆಳಗನ) ಎಂದಿದೆ.

© 2009 Truth for Today